# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಜೆ.ಇ.1/6/2006–07 ದಿನಾಂಕ:12–6–2006

## –:: ಮರು ಟೆಂಡರ್ ಪ್ರಕಟಣೆ ::–

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ನಗರಸಭಾ ನಿಧಿಯಿಂದ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಹಾಗೂ ಕರ್ನಾಟಕ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಶನ್‌ನಲ್ಲಿ ನೋಂದಾಯಿಸಿದ ಅಧಿಕೃತ ಫ್ಯಾಬ್ರಿಕೇಟರ್ಸ್ ಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇಚ್ಛೆಯುಳ್ಳವರು ತಮ್ಮ ಶೇಕಡವಾರು/ಐಟಂವಾರು ದರಗಳನ್ನು ನಮೂದಿಸಿದ ಟೆಂಡರ್‌ಗಳನ್ನು ಲಕೋಟೆಯ ಮೇಲೆ ಕಾಮಗಾರಿ ಹೆಸರನ್ನು ನಮೂದಿಸಿದ ಜೊತೆಗೆ ನಿಗಧಿಪಡಿಸಿರುವ ಇ.ಎಂ.ಡಿ.ಹಣವನ್ನು ಡಿ.ಡಿ ಮುಖಾಂತರ ಅಥವಾ ಕಛೇರಿಯಲ್ಲಿ ಪಾವತಿ ಮಾಡಿದ ನಗದು ರಶೀದಿಯನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು, ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರಿಗೆ ದಿನಾಂಕ: 23–6–2006ರಂದು ಸಂಜೆ 4.00ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಿದೆ. ಹಾಗೂ ಷರತ್ತುಗಳು ಕಛೇರಿಯ ನಾಮಫಲಕದಲ್ಲಿ ಮತ್ತು ಜಿಲ್ಲಾ ಟೆಂಡರ್ ಬ್ಯುಲೆಟಿನ್‌ನಲ್ಲಿ ಪ್ರಕಟಿಸಿರುವಂತೆ, ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಬಹುದು.

1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ: 19–6–2006
2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ: 21–6–2006
3) ಟೆಂಡರ್ ಫಾರಂ ಶುಲ್ಕ ರೂ.250/–ಗಳು (ಮಾರಾಟ ಶುಲ್ಕ ಸೇರಿ)
4) ಪ್ರತಿ ಕಾಮಗಾರಿ ಮುಗಿಸಲು ನೀಡಿರುವ ಕಾಲಾವಧಿ : 3 ತಿಂಗಳು

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಇ,ಎಂ,ಡಿ, ಮೊತ್ತ |
|---|---|---|---|
| 1 | ದೊಡ್ಡಬಳ್ಳಾಪುರ ಹಳೇ ಬಸ್ ನಿಲ್ದಾಣದಲ್ಲಿ ಬಸ್ ನಿಲ್ದಾಣದ ಫ್ಲಾಟ್ ಫಾರಂ ನಿರ್ಮಿಸುವ ಕಾಮಗಾರಿ | 2,25,000–00 | 5625–00 |
| 2 | ದೊಡ್ಡಬಳ್ಳಾಪುರ ಹಳೇ ಬಸ್ ನಿಲ್ದಾಣದಲ್ಲಿ ಬಸ್ ಶೆಲ್ಟರ್ ನಿರ್ಮಾಣ ಕಾಮಗಾರಿ. (ಅಂದಾಜು ಮೊತ್ತ ಮಾರುಕಟ್ಟೆ ದರಗಳಂತೆ ತಯಾರಿಸಿದ್ದು, ವ್ಯತ್ಯಾಸಕ್ಕೆ ಒಳಪಟ್ಟಿದೆ.) | 6,00,000–00 | 12000–00 |
| 3 | 30ನೇ ವಾರ್ಡ್ ಶಾಂತಿನಗರ ಒಂದನೇ ಕ್ರಾಸ್‌ನಲ್ಲಿ ಹೊಸ ಕಲ್ವರ್ಟ್ ನಿರ್ಮಿಸುವ ಕಾಮಗಾರಿ ವಿಚಾರ. | 8,000–00 | 200–00 |

**ಷರತ್ತುಗಳು ಮೇಲಿನ ಕಾಮಗಾರಿಗಳಿಗೆ ಅನ್ವಯಿಸುವಂತೆ:**

1) ಇ.ಎಂ.ಡಿ. ಹಣವನ್ನು ಡಿ.ಡಿ.ಅಥವಾ ಕಛೇರಿಯಲ್ಲಿ ನಗದು ಪಾವತಿಸಿದ ರಸೀದಿಯೊಂದಿಗೆ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿಗೆ ಟೆಂಡರ್‌ನೊಂದಿಗೆ ಸಲ್ಲಿಸಬೇಕು, ಇ.ಎಂ.ಡಿ. ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಹಾಗೂ ಖಾಲಿ ಟೆಂಡರ್ ಫಾರಂಗೆ ಕಟ್ಟಿದ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
2) ಟೆಂಡರ್‌ಲಕೋಟೆಯ ಮೇಲೆ ಕಾಮಗಾರಿ ಹೆಸರು ಮತ್ತು ಕ್ರಮ ಸಂಖ್ಯೆಯನ್ನು ನಮೂದಿಸಿರಬೇಕು.
3) ಟೆಂಡರ್‌ಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸುವುದು, ಯಾವುದೇ ಕಾರಣ ನೀಡದೆ ದರಪಟ್ಟಿಯನ್ನು ತಿರಸ್ಕರಿಸುವ ಅಥವಾ ಯಾವುದೇ ಕ್ಷಣದಲ್ಲಾದರೂ ರದ್ದು ಪಡಿಸುವ ಅಥವಾ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ರೀತಿಯ ಹಕ್ಕುಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

| | | | |
|---|---|---|---|
| ಸಹಿ:– | ಸಹಿ:– | ಸಹಿ:– | ಸಹಿ:– |
| (ಶಾಂತಮ್ಮ) | (ವಿ.ರಾಜಪ್ಪ) | (ಸು.ನರಸಿಂಹಮೂರ್ತಿ) | (ಚಿಕ್ಕಣ್ಣ) |
| ಅಧ್ಯಕ್ಷರು, | ಉಪಾಧ್ಯಕ್ಷರು, | ಸ್ಥಾ.ಸ.ಅಧ್ಯಕ್ಷರು, | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. |

**"ನಕಲು ಪ್ರತಿ"**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ**